ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ .ಸಿ. ವೇಣುಗೋಪಾಲ್ ಅವರ ನಿಯಮ 330 ರಡಿ

ಗಮನ ಸೆಳೆಯುವ ಸೂಚನಾ ಟಿಪ್ಪಣಿಗೆ ಉತ್ತರ

ವಿಷಯ: ರಾಷ್ಟ್ರಕವಿ, ಕರ್ನಾಟಕ ರತ್ನ ಮುಂತಾದ ಬಿರುದುಗಳನ್ನು ನೀಡಲು ಇರುವ ಮಾನದಂಡಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒದಗಿಸಲಾಗುತ್ತಿರುವ ಅನುದಾನ, ಅಲ್ಲಿರುವ ಸಿಬ್ಬಂದಿಗಳ ಕೊರತೆ ಜಯಂತಿಗಳು, ಉತ್ಸವಗಳನ್ನು ಪರಿಣಾಮಕಾರಿಯಾಗಿ ನಡೆಸದೆ ಅದರ ಉದ್ದೇಶ ಸಫಲವಾಗುತ್ತಿಲ್ಲದಿರುವ ಬಗ್ಗೆ ರಾಜ್ಯದ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘಗಳಿಗೆ ಒದಗಿಸಲಾಗಿರುವ ಅನುದಾನ, ಸಂಸ್ಕೃತಿಯನ್ನು ಉಳಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳು ಕನ್ನಡ ನಾಡು ನುಡಿ ಬಗ್ಗೆ ಇಲಾಖೆಯ ಕಾರ್ಯಕ್ರಮ ಇತ್ಯಾದಿ ವಿಚಾರಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಉತ್ತರ :

- ಕನ್ನಡದ ರಾಷ್ಟ್ರಕವಿ ಪುರಸ್ಕಾರಕ್ಕೆ ನಾಡಿನ ಕವಿಯೊಬ್ಬರನ್ನು ಆಯ್ಕೆಮಾಡುವ ಸಲುವಾಗಿ ಶ್ರೀ ಕೋ ಚನ್ನಬಸಪ್ಪ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತ್ತಿಯನ್ನು ರಚಿಸಿ ದಿನಾಂಕ:28.11.2014 ರಂದು ಸರ್ಕಾರವು ಆದೇಶ ಹೊರಡಿಸಿತ್ತು. ಸದರಿ ಆಯ್ಕೆ ಸಮಿತಿಯು ರಾಷ್ಟ್ರಕವಿ ಪುರಸ್ಕಾರದ ಆಯ್ಕೆಗಾಗಿ ಮಾನದಂಡಗಳನ್ನು ರೂಪಿಸಿ, ಸರ್ಕಾಕ್ಕೆ ದಿನಾಂಕ:07.05.2015 ರಂದು ವರದಿ ಸಲ್ಲಿಸಲಾಗಿರುತ್ತದೆ. ಸದರಿ ಸಮಿತಿಯು ರೂಪಿಸಿದ ಮಾನದಂಡಗಳು ಈ ಕೆಳಕಂಡಂತಿರುತ್ತವೆ.

1. ಅಸಾಧಾರಣ, ಗುಣ- ಗಾತ್ರದಲ್ಲಿ ಗಣನೀಯ ಶಾಶ್ವತ ಕಾವ್ಯ- ಗದ್ಯ ವಿವಿಧ ಪ್ರಕಾರಗಳ ಸಾಹಿತ್ಯಸೃಷ್ಟಿ.
2. ದೇಶ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ತ್ಯಾಗಿಗಳು ಆ .ಸಂಗ್ರಾಮಕ್ಕೆ ಸ್ಪಂದಿಸಿ ಸಾಹಿತ್ಯ ರಚಿಸಿದವರು, ಕರ್ನಾಟಕ ಏಕೀಕರಣಕ್ಕೆ ಕನ್ನಡ ಹಿತರಕ್ಷಣೆಗೆ ಕರ್ನಾಟಕ ಅಭಿವೃದ್ಧಿಗಾಗಿ ಶ್ರಮಿಸಿದವರು ಮತ್ತು ಸಂಸ್ಕೃತಿ ಉನ್ನತಿಗಾಗಿ ದುಡಿದವರು, ಗಡಿನಾಡು, ಹೊರನಾಡು ಕನ್ನಡದ ಕನ್ನಡಿಗರಿಗೆ ಸಹಾಯ ಮಾಡಿದವರು.
3. ಮೇರುಸದೃಶ ವ್ಯಕ್ತಿತ್ವ, ಲೌಕಿಕ ಪಾರಮಾರ್ಥಿಕ ಆದರ್ಶ ಜೀವನ, ಇಡೀ ಜನಾಂಗ ಅವರ ಮಾತನ್ನು ಕೇಳಬೇಕು. ದಾರ್ಶನಿಕರು ನಾಡಗುರುಗಳಂತಿರಬೇಕು.
4. "ಮನುಜ ಕುಲ ತಾನೊಂದೆ ವಲಂ' ಎಂಬ ಪಂಪನ ವಿಶ್ವಮಾನವ ದೃಷ್ಟಿ... 'ಸರ್ವಜನಾಂಗದ ಶಾಂತಿಯ ತೋಟ' ಎಂಬ ಕುವೆಂಪು ಮಾತಿನಲ್ಲಿ ನಂಬಿಗೆ ಇರುವಂಥ ದಿವ್ಯಜೀವಿಗಳಾಗಿರಬೇಕು.
5. ಸರ್ವಧರ್ಮ, ಸಮನ್ವಯ, ಸರ್ವೋದಯ, ಸಮಾನತೆಯ ಹರಿಕಾರರು, ಆಚಾರ್ಯ ಪುರುಷರಾಗಿರುವವರು.
6. ಅವರು ಎಂದೂ ಯಾವ ಆಪಾದನೆಗೂ ಗುರಿಯಾಗಿರಬಾರದು ಹಾಗೂ ಬಹುಮತ ಇತ್ಯಾದಿ ಚುನಾವಣಾ ಪ್ರಕ್ರಿಯೆಯಿಂದ ಆಯ್ಕೆ ಆಗಬಾರದು.

- ಕರ್ನಾಟಕ ರತ್ನ ಪ್ರಶಸ್ತಿಗೆ ಸಂಬಂಧಿಸಿದಂತೆ,

  ಈ ಪ್ರಶಸ್ತಿಯನ್ನು ಕರ್ನಾಟಕದಲ್ಲಿ ಜನಿಸಿ, ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅಂದರೆ, ಸಾಂಸ್ಕೃತಿಕ, ವೈಜ್ಞಾನಿಕ, ಮಾನವಿಕ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಅತ್ಯಂತ ಗಣನೀಯ ಸೇವೆಯನ್ನು ಸಲ್ಲಿಸಿದ ಕನಿಷ್ಠ 60 ವರ್ಷ ತುಂಬಿದ ಮಹನೀಯರನ್ನು ಗುರುತಿಸಿ, ಸರ್ಕಾರವು ಪ್ರಶಸ್ತಿಯನ್ನು ನೀಡಲು ತೀರ್ಮಾನಿಸುತ್ತದೆ.

2.....

- ಪ್ರಸಕ್ತ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ರೂ.22,522.32 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.
- ಇಲಾಖೆಯಲ್ಲಿ ಒಟ್ಟು 278 ಅಧಿಕಾರಿ ಮತ್ತು ಸಿಬ್ಬಂದಿಯವರಿದ್ದು, ಇದರಲ್ಲಿ ವೃಂದ 'ಎ' 12, ವೃಂದ 'ಬಿ' 44, ವೃಂದ 'ಸಿ' 136, ವೃಂದ 'ಡಿ' 86 ಇದರಲ್ಲಿ ವೃಂದ 'ಎ' 10, ವೃಂದ 'ಬಿ' 29, ವೃಂದ 'ಸಿ' 50, ವೃಂದ 'ಡಿ' 21 ಒಟ್ಟು 110 ಕಾರ್ಯನಿರ್ವಹಿಸತ್ತಿದ್ದು, ವೃಂದ 'ಎ' 02, ವೃಂದ 'ಬಿ' 15, ವೃಂದ 'ಸಿ' 86, ವೃಂದ 'ಡಿ' 65 ಒಟ್ಟು 168 ಅಧಿಕಾರಿ, ಸಿಬ್ಬಂದಿಗಳು ಖಾಲಿಯಿರುತ್ತದೆ.
- ಇಲಾಖೆಯಿಂದ ಆಚರಿಸಲಾಗುತ್ತಿರುವ ಜಯಂತಿಗಳನ್ನು ರಾಜ್ಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಚರಿಸಲಾಗುತ್ತದೆ. ಜಯಂತಿಗಳನ್ನು ಆಚರಿಸುವ ಸಂದರ್ಭದಲ್ಲಿ ವಿಶೇಷ ಉಪನ್ಯಾಸ, ಸಂಗೀತ ಕಾರ್ಯಕ್ರಮ, ಜಾನಪದ ಕಲಾತಂಡಗಳ ಮೆರವಣಿಗೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ, ಅರ್ಥಪೂರ್ಣವಾಗಿ ಜಯಂತಿಯನ್ನು ಆಚರಿಸಲಾಗುತ್ತದೆ.
- ಉತ್ಸವಗಳನ್ನು ಆಚರಿಸುವ ಸಂದರ್ಭದಲ್ಲಿ ಸಂಬಂಧಪಟ್ಟಂತ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮತ್ತು ಇತರೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಸಭೆಗಳನ್ನು ಏರ್ಪಡಿಸಿ, ಸಭೆಯ ತೀರ್ಮಾನದಂತೆ ಕವಿಗೋಷ್ಠಿ, ವಿಚಾರಗೋಷ್ಠಿ ಮತ್ತು ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಈ ಉತ್ಸವಗಳ ಉದ್ದೇಶ ಸಫಲ ಹಾಗೂ ಪರಿಣಾಮಕಾರಿಯಾಗಿ ಆಚರಿಸಲಾಗುತ್ತದೆ.
- ಕಳೆದ ಸಾಲಿನಲ್ಲಿ ಅರ್ಹ ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಅನುದಾನ ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಸಾಮಾನ್ಯ ಯೋಜನೆಯಡಿ ಸಂಘ ಸಂಸ್ಥೆಗಳಿಗೆ ಅನುದಾನ ಹೊರತುಪಡಿಸಿ, ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಅನುದಾನ ನೀಡಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿಕೊಂಡು, ಜಿಲ್ಲಾ ಹಂತದಲ್ಲಿಯೇ ಸಂಘ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಾಯೋಜನೆ, ಯುವ ಸೌರಭ, ಸಾಂಸ್ಕೃತಿಕ ಸೌರಭ, ಸಾಂಸ್ಕೃತಿಕ ಸಂಘ-ಸಂಸ್ಥೆಗಳಿಗೆ ಧನಸಹಾಯ, ಚಿಗುರು, ಸಾಂಸ್ಕೃತಿಕ ರಂಗಮಂದಿರ/ಬಯಲು ರಂಗಮಂದಿರಗಳಿಗೆ ಧನಸಹಾಯ, ಮುಂತಾದವುಗಳು.
- ಕನ್ನಡ ನಾಡು-ನುಡಿಗೆ ಸಂಬಂಧಿಸಿದಂತೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕದಂಬೋತ್ಸವ, ಮೈಸೂರು ದಸರಾ, ಹಂಪಿ ಉತ್ಸವ ಹಾಗೂ ಮುಂತಾದ ಉತ್ಸವಗಳನ್ನು ಮತ್ತು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಳ್ಳಲಾಗುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ನೀಡಲಾಗುತ್ತದೆ. ಇದೂ ಅಲ್ಲದೆ, ಇಲಾಖೆಯು ಪ್ರತಿ ಜಿಲ್ಲೆಯಲ್ಲಿ ಸಹಾಯಕ ನಿರ್ದೇಶಕರ ಕಚೇರಿಯನ್ನು ಹೊಂದಿದ್ದು, ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಇದೂ ಅಲ್ಲದೆ, ರಾಜ್ಯದ 04 ರಂಗಾಯಣಗಳು, 13 ಅಕಾಡೆಮಿಗಳು, 02 ಪ್ರಾಧಿಕಾರಗಳು ಹಾಗೂ 24 ಟ್ರಸ್ಟ್‌ಗಳ ಮುಖಾಂತರ ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

(ಸಿ.ಟಿ.ರವಿ)

ಮುಂದುವರೆದು ಉಡುಪಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಇದುವರೆಗೂ ರೂ **4.00** ಕೋಟಿ ಅಂದಾಜು ವೆಚ್ಚದಲ್ಲಿ ಯಾವುದೇ ಡಾ ಬಿ.ಆರ್ ಅಂಬೇಡ್ಕರ್ / ಸಮುದಾಯ ಭವನ ನಿರ್ಮಾಣವಾಗಿರುವುದಿಲ್ಲ.

ಸಕಇ 159 ಪಕವಿ 2020

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಸಚಿವರು